RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ - IV-A | ಬೆಂಗಳೂರು, ಶನಿವಾರ, ಜೂನ್ ೨೧, ೨೦೧೪ (ಜ್ಯೇಷ್ಠ ೩೧, ಶಕ ವರ್ಷ ೧೯೩೬) | ನಂ. ೪೧೮ |
|---|---|---|
| Part - IV-A | Bangalore, Saturday, June 21, 2014 (Jyeishta 31, Shaka Varsha 1936) | No. 418 |



ಆರ್ಥಿಕ ಸಚಿವಾಲಯ

ಅಧಿಸೂಚನೆ-I

ಸಂಖ್ಯೆ: ಆಇ 02 ಸನಿತಿ 2014, ಬೆಂಗಳೂರು, ದಿನಾಂಕ: 20-06-2014

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಿಗೆ ಇನ್ನಷ್ಟು ತಿದ್ದುಪಡಿ ಮಾಡುವ ನಿಯಮಗಳ ಕರಡನ್ನು ಅದರಿಂದ ತೊಂದರೆಗೊಳಗಾಗಬಹುದಾದ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಅಧಿಕೃತ ರಾಜ್ಯಪತ್ರದಲ್ಲಿ ಆ ಕರಡು ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆಗಳು/ಸಲಹೆಗಳನ್ನು ಆಹ್ವಾನಿಸಿ, ದಿನಾಂಕ: 17.05.2014ರಂದು ಕರ್ನಾಟಕ ರಾಜ್ಯಪತ್ರದ ಭಾಗ-IV-ಎ ರಲ್ಲಿ ಅಧಿಸೂಚನೆ-I ಸಂಖ್ಯೆ: ಎಫ್‌ಡಿ 02 ಎಸ್‌ಆರ್‌ಎ 2014, ದಿನಾಂಕ: 17.05.2014ನ್ನು ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 1978ರ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 8ರೊಂದಿಗೆ ಓದಿಕೊಳ್ಳಲಾಗುವ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಖಂಡ(ಎ)ದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 17.05.2014ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿದ್ದುದರಿಂದ ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಆಕ್ಷೇಪಣೆಗಳು/ ಸಲಹೆ ಗಳು ಬಂದಿರುವುದಿಲ್ಲವಾದ್ದರಿಂದ;

ಈಗ 1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 8 ರೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ಈ ಮೂಲಕ ಮಾಡುತ್ತದೆ, ಎಂದರೆ:-

ನಿಯಮಗಳು

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಾಗರೀಕ ಸೇವಾ (5ನೇ ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 235ಎ ರ ತಿದ್ದುಪಡಿ.-** ಕರ್ನಾಟಕ ನಾಗರೀಕ ಸೇವಾ ನಿಯಮಗಳ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 235ಎ ರಲ್ಲಿ, ಖಂಡ (xii)ರಲ್ಲಿ,-

(i). ಉಪ ಖಂಡ (ಎ) ಹಾಗೂ ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"ಸದರಿ ಸಂಸ್ಥೆಯಲ್ಲಿ ಖಾಯಂ ಆಗಿ ವಿಲೀನಗೊಂಡ ಸರ್ಕಾರಿ ನೌಕರನ ಕುಟುಂಬವೂ ಸಹ ನೌಕರನು ಮೃತನಾದ ದಿನಾಂಕದ ಮುಂದಿನ ದಿನಾಂಕದಿಂದ ಕುಟುಂಬ ನಿವೃತ್ತಿ ವೇತನಕ್ಕೆ

ಅರ್ಹವಾಗಿರುತ್ತದೆ. ಈ ಸೌಲಭ್ಯದ ಜೊತೆಗೆ, ಸಂಸ್ಥೆಗೆ ನಿಯಮಗಳಡಿ ಕುಟುಂಬ ನಿವೃತ್ತಿ ವೇತನದ ಸಂದಾಯದ ಪದ್ಧತಿ ಇದ್ದಲ್ಲಿ ಸದರಿ ಸಂಸ್ಥೆಯಿಂದ ಕುಟುಂಬ ನಿವೃತ್ತಿ ವೇತನ ಸೌಲಭ್ಯಕ್ಕೆ ಅರ್ಹವಾಗಿರುತ್ತದೆ.

ಪರಂತು, ಈ ನಿಯಮದ ಮೇರೆಗೆ ಅಂಗೀಕಾರಾರ್ಹ ಸೌಲಭ್ಯವು ಈಗಾಗಲೇ ಮಂಜೂರು ಮಾಡಿದ ಕುಟುಂಬ ನಿವೃತ್ತಿ ವೇತನ ಪ್ರಕರಣಗಳಲ್ಲಿ ಸೇವೆಯಲ್ಲಿದ್ದಂತೆ ಮರಣ ಹೊಂದಿರುವ ಅಥವಾ ಸೇವೆಯಿಂದ ನಿವೃತ್ತರಾದ ಪ್ರಕರಣಗಳಲ್ಲಿ ಈಗಾಗಲೇ ಮಂಜೂರು ಮಾಡಿದ ಕುಟುಂಬ ನಿವೃತ್ತಿ ವೇತನದ ಪೂರ್ವ ಪ್ರಕರಣಗಳಿಗೂ ಅನ್ವಯಿಸುತ್ತದೆ. ಆದಾಗ್ಯೂ, ಇಂತಹ ಆರ್ಥಿಕ ಸೌಲಭ್ಯವು ಪೂರ್ವ ಪ್ರಕರಣಗಳಲ್ಲಿ ಈ ನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದ ಮುಂದಿನ ತಿಂಗಳ ಮೊದಲನೆಯ ದಿನಾಂಕದಿಂದ ಪ್ರಾಪ್ತವಾಗತಕ್ಕದ್ದು".

(ii) ಉಪ ಖಂಡ (ಸಿ)ನ್ನು ಬಿಟ್ಟುಬಿಡತಕ್ಕದ್ದು.

(iii) ಉಪ ಖಂಡ (ಡಿ)ರಲ್ಲಿ "ಮತ್ತು ಇದು, ಸದರಿ ಸಂಸ್ಥೆಯು ಸಂಬಂಧಪಟ್ಟ ಸೌಲಭ್ಯಗಳಿಗೆ ಅವಕಾಶ ಕಲ್ಪಿಸದಿದ್ದ ಸಂದರ್ಭಗಳಲ್ಲಿ ಮಾತ್ರ ಅಂಗೀಕಾರಾರ್ಹವಾಗಿರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(iv) ಉಪ ಖಂಡ (ಇ)ರಲ್ಲಿ "ಸದರಿ ಸಂಸ್ಥೆಯಲ್ಲಿ ಅಂಥ ಯಾವುದೇ ಕ್ಲೇಮು ಅಸ್ತಿತ್ವದಲ್ಲಿಲ್ಲ ಅಥವಾ ಸದರಿ ಸಂಸ್ಥೆಯು ಅದರ ಕುಟುಂಬ ನಿವೃತ್ತಿ ವೇತನ ಯೋಜನೆಯನ್ನು ಸಂಬಂಧಪಟ್ಟ ವ್ಯಕ್ತಿಗೆ ನೀಡುವುದಿಲ್ಲ ಎಂಬುದನ್ನು ಸ್ವತ: ಮನದಟ್ಟು ಮಾಡಿಕೊಂಡ ತರುವಾಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**3. ನಿಯಮ 235ಬಿ ರ ತಿದ್ದುಪಡಿ.–** ಸದರಿ ನಿಯಮಗಳ ನಿಯಮ 235ಬಿ ರ ಉಪ ನಿಯಮ (1) ರಲ್ಲಿ, ಖಂಡ (ಬಿ)ರಲ್ಲಿನ ಅಂಶ(i)ರಲ್ಲಿ, ಈ ಮುಂದಿನದನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

"ಸದರಿ ಸಂಸ್ಥೆಯಲ್ಲಿ ಖಾಯಂ ಆಗಿ ವಿಲೀನಗೊಂಡ ಸರ್ಕಾರಿ ನೌಕರನ ಕುಟುಂಬವು, ನೌಕರನು ಮೃತನಾದ ದಿನಾಂಕದ ಮುಂದಿನ ದಿನಾಂಕದಿಂದ ಕುಟುಂಬ ನಿವೃತ್ತಿ ವೇತನ ಸೌಲಭ್ಯಗಳ ಜೊತೆಗೆ, ಅಂಥ ಸಂಸ್ಥೆಯಲ್ಲಿ ಕುಟುಂಬ ನಿವೃತ್ತಿ ವೇತನ ಸಂದಾಯದ ಪದ್ಧತಿ ಇದ್ದಲ್ಲಿ, ಸದರಿ ಸಂಸ್ಥೆಯಿಂದ ಕುಟುಂಬ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹವಾಗಿರುತ್ತದೆ. ಕುಟುಂಬ ನಿವೃತ್ತ ವೇತನ ಸೌಲಭ್ಯವು ಸದರಿ ಸಂಸ್ಥೆಯಲ್ಲಿ, ನೌಕರನು ವಿಲೀನ ಹೊಂದಿದ ತರುವಾಯ, ಸರ್ಕಾರದಿಂದ ಯಾರು ವಾಸ್ತವವಾಗಿ ನಿವೃತ್ತಿ ವೇತನಕ್ಕೆ ಅರ್ಹರಾಗಿದ್ದರೋ/ಅರ್ಹರಾಗಿದ್ದಾರೋ ಆ ವ್ಯಕ್ತಿಯ ಕುಟುಂಬಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಸೌಲಭ್ಯವು ಸೇವಾ ಉಪದಾನ ಪಡೆಯುವ, ಅಂದರೆ ಹತ್ತು ವರ್ಷಗಳ ಅರ್ಹತಾದಾಯಕ ಸೇವೆಯನ್ನು ಸರ್ಕಾರದಲ್ಲಿ ಸಲ್ಲಿಸುವ ಮೊದಲೇ ವಿಲೀನ ಹೊಂದಿದ ನೌಕರರ ಕುಟುಂಬಗಳಿಗೆ ಅಂಗೀಕಾರಾರ್ಹವಲ್ಲ.

ಪರಂತು, ಈ ನಿಯಮದ ಮೇರೆಗೆ ಅಂಗೀಕಾರಾರ್ಹ ಸೌಲಭ್ಯವು ಈಗಾಗಲೇ ಮಂಜೂರು ಮಾಡಿದ ಕುಟುಂಬ ನಿವೃತ್ತಿ ವೇತನ ಪ್ರಕರಣಗಳಲ್ಲಿ ಸೇವೆಯಲ್ಲಿದ್ದಂತೆ ಮರಣ ಹೊಂದಿರುವ ಅಥವಾ ಸೇವೆಯಿಂದ ನಿವೃತ್ತರಾದ ಪ್ರಕರಣಗಳಲ್ಲಿ ಈಗಾಗಲೇ ಮಂಜೂರು ಮಾಡಿದ ಕುಟುಂಬ ನಿವೃತ್ತಿ ವೇತನದ ಪೂರ್ವ ಪ್ರಕರಣಗಳಿಗೂ ಅನ್ವಯಿಸುತ್ತದೆ. ಆದಾಗ್ಯೂ, ಇಂತಹ ಆರ್ಥಿಕ ಸೌಲಭ್ಯವು ಪೂರ್ವ ಪ್ರಕರಣಗಳಲ್ಲಿ ಈ ನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದ ಮುಂದಿನ ತಿಂಗಳ ಮೊದಲನೆಯ ದಿನಾಂಕದಿಂದ ಪ್ರಾಪ್ತವಾಗತಕ್ಕದ್ದು".

ತಿದ್ದುಪಡಿ ಸಂಖ್ಯೆ: 1280

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಸ್.ಗೋಪಾಲಕೃಷ್ಣ**
ಸರ್ಕಾರದ ಜಂಟಿ ಕಾರ್ಯದರ್ಶಿ(ಸೇವೆಗಳು)
ಆರ್ಥಿಕ ಇಲಾಖೆ

**FINANCE SECRETARIAT**

**NOTIFICATION-I**

**No. FD 02 SRA 2014, Bangalore, Dated: 20.06.2014.**

Whereas the draft of the following rules further to amend the Karnataka Civil Services Rules, was published as required by clause(a) of sub-section-(2) of Section 3 read with section 8 of the Karnataka State Civil Services Act, 1978 (Karnataka Act 14 of 1990) in Notification-I No. FD 02 SRA 2014, dated 17.05.2014 in Part IV-A of the Karnataka Gazette dated 17.05.2014 inviting objections and suggestions from all persons likely to be affected thereby within fifteen days from the date of its publication in the Official Gazette.

Whereas the said Gazette was made available to the public on 17.05.2014.

And whereas, no objections and suggestions have been received by the State Government.

Now, therefore, in exercise of the powers conferred by sub-section(1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely:-

**RULES**

1. **Title and commencement**.- (1) These rules may be called the Karnataka Civil Services (5th Amendment) Rules, 2014.

(2) They shall come into force from the date of their publication in the Official Gazette.

**2. Amendment of rule 235A**.- In the Karnataka Civil Services Rules (hereinafter referred to as the said rules), in rule 235A, in clause (xii),-

(i) for sub-clause (a), and the entries relating thereto, the following shall be substituted, namely:-

"(a) The family of the Government servant, who has been permanently absorbed in the said organisation shall also be eligible for family pension from the date following the date of death of the employee in addition to the benefit of family pension, if any, admissible under the rules of the organization:

Provided that, the benefit under this rule is also available to the eligible past cases of death while in service or after retirement, where the family pension has been settled as per the then existing rules. However, the financial benefits in past cases will be eligible with effect from the first of the month following the date of publication of this rules in the Official Gazette".

(ii) sub-clause (c) shall be omitted;

(iii) in sub-clause (d), the words "and shall be admissible only in cases where the said organization has not provided for corresponding benefits" shall be omitted;

(iv) in sub-clause (e), the words "after satisfying itself that no such claim exists in the said organization or that the said organization has not extended its family pension scheme to the person concerned" shall be omitted.

**3. Amendment of rule 235B**.- In rule 235B of the said rules, in sub-rule (1), in clause (b), in item (i), the following shall be inserted at the end, namely :-